# ಮಾಧವ ಮಧುಸೂದನ ಯಾದವ ಕುಲರನ್ನ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 32.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 449.
3. **Note:** Lyrics mentioned here are as per Ref. 1. The wordings in Ref. 2 are almost similar to Ref. 1 with few variations. These wordings are not considered here.
4. **Note:** Ankita is different in both the books. We have considered book in Ref.1 as standard and taken that Ankita for listing.

ರಾಗ: ಅಸಾವೇರಿ ತಾಳ: ಅಟ

ಮಾಧವ ಮಧುಸೂದನ ಯಾದವ ಕುಲರನ್ನ ಯ-
ಶೋದೆ ಕರೆದಳು ಬಾರೆಂದು – ಮುದ್ದಿಸಿ ಮಗನ ॥ ಪ ॥

ಸಂಗಡಿಗರನೆಲ್ಲ ಬಿಟ್ಟು ಬಾರೈ ಚೆಲುವ
ಮುಂಗೈಯ ವಾಕು ಬೆರಳ ಹೊನ್ನುಂಗರ
ಝುಂಗಿಪ ಹುರಿಗೆಜ್ಜೆ ಉಡೆದಾರವನು ಕಂಡು
ಅಂಗನೆಯರು ನಿನ್ನನೊಯ್ವರೊ
ಕಂಗಳ ಸಿರಿಯೆ ನೀ ಕಲ್ಪವೃಕ್ಷವೆ ಎಂದು
ಡಿಂಗರಿಗರು ಕಂಡರೆ ಬಿಡರೊ ನಿ-
ನ್ನಂಘ್ರಿಯ ಮೇಲೆ ನೊಸಲನಿಡುವೆ ಕೃಷ್ಣ
ಕಂಗಳ ಸಿರಿಯೆ ಬಾರೋ – ರಂಗಯ್ಯ ॥ 1 ॥

ಬಾಲಕರೊಡನಾಟ ಸಾಕು ಬಾ ಬಾರೈಯ
ನೀಲಾಂಗ ನಿನ್ನ ಮುಂದಲೆ ಮುತ್ತಿನರಳೆಲೆ
ಕೀಲು ಮಾಗಾಯಿ – ಮಾಣಿಕ ಪುಲಿಯುಗುರ ಕಂಡು
ಸೋಲ್ವರೊ ನಿನಗೇಸೋ ಸೋಗೆಯರು
ಶ್ರೀಲೋಲ ನಿನ್ನಲಿ ಕಂಸನ ತುಂಬಿದೊ-

ಡ್ಡೋಲಗದೊಳು ರಕ್ಕಸರು ಪಂಥವನಾಡೆ
ವೀಳ್ಯವ ಪಿಡಿದೆ ಕೊಲುವೆನೆಂದು ನಿನ್ನಯ
ಕಾಲಿಗೆ ಎರಗುವೆ ಬಾರೋ – ರಂಗಯ್ಯ ॥ 2 ॥

ಬೊಮ್ಮದ ಮರಿಯೆ ವಿಶ್ವವನೆಲ್ಲ ಹೃದಯದೊ-
ಳೊಮ್ಮೆ ತೋರುವನೆಂದು ಕಂಡು ನಾ ಬಲ್ಲೆ
ಎಮ್ಮ ಮನಕೆ ಅಹಲ್ಲಾದನು ನೀನೆ
ಉಮ್ಮಯದಿಂ ಭಾಗವತರ ಪಾಲಿಸುತಿಪ್ಪ
ಗಮ್ಯ ಗೋಚರ ಸಿರಿ ಪುರಂದರ ವಿಠಲ ತೊರೆ-
ದಮ್ಮೆಯ ಕೊಡುವೆನು ಬಾರೋ – ರಂಗಯ್ಯ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಯಶೋದೆಯು ಶ್ರೀ ಕೃಷ್ಣನನ್ನು - ಬಾ ಎಂದು ವಿಧ ವಿಧದ ಆಸೆಗಳನ್ನು ತೋರಿಸಿ - ಕರೆದಂತೆ ಈ ಹಾಡಿನಲ್ಲಿದೆ.

**ವಾಕು** = ಮುಂಗೈ ಆಭರಣ

**ಝುಂಗಿಪ** = ಜಾಣ ಜಾಣ ವೆನ್ನುವ

**ಡಿಂಗರಿಗ** = ಭಕ್ತ

**ಕೀಲು ಮಾಗಾಯಿ** = ಕೀಲವಿರುವ ಮಾಗಾಯಿ

**ನೊಸಲು** = ಹಣೆ

**ಅಂಘ್ರಿ** = ಪಾದ

**ಸೋಗೆಯರು** = ಸೊಬಗಿಯರು, ಚೆಲುವೆಯರು

**ವೀಳ್ಯವ ಪಿಡಿ** = ಕೆಲಸವನ್ನು ಒಪ್ಪಿಕೊಳ್ಳು

**ಉಮ್ಮಯ** = ಉತ್ಸಾಹ

**Classification:** Keerthane
**Ankita:** siri purandara vittala
**Location:** NA

**Category:** Krishna Leele
**Sub-Category:** Madhava, madhu, yashode, maga, ungura, bangara, gejje, gopi, hengasu, kalpavruksha, Krishna, kannu, ranga, makkalu, kamsa, asura, loka, hrudaya, mana, bhagavata, abharana,
**Pravachana:** NA
**Explanation:** NA